District Boards (Funds at their credit when handing over charge).

Q.—400. **Sri K. PRABHAKAR** (Nelamangala—Scheduled Castes).—

Will the Government be pleased to state :—

(*a*) what were the funds that were at the disposal of each District Board at the time of handing over them to the charge of Deputy Commissioners recently ;

(*b*) the amount required to pay off the pending bills immediately after their tranfer to the Deputy Commissioners (yearwise pending bills may be noted) ;

(*c*) the amount required to complete all the works (i) proposed, (ii) estimated, (iii) for which estimates are sanctioned, and (iv) works taken up but not completed ?

A.—**Sri T. CHANNIAH** (Minister for Public Health and Local Self-Government).—

Name of the District Board			*Amount* Rs.
1. Bangalore District Board			93,283
2. Mysore	do	...	Minus 5,01,307
3. Kolar	do	...	33,934
4. Tumkur	do	...	74,429
5. Hassan	do	...	26,615
6. Chitaldrug	do	...	53,670
7. Shimoga	do	...	25,251
8. Mandya	do	...	4,32,758
9. Ballary	do	...	2,31,349
10. Chikmagalur	do	...	39,465

(*b*) Please see Statement A.

(*c*) Please see Statement B.

STATEMENT A.

Statement showing the amount required to pay off the pending bills by the District Boards.

Sl. No.	Name of the District Board	Amount required	Year to which the pending bills refer	Remarks
		Rs.		
1	Bangalore ...	22,879	...	
2	Mysore ...	7,258	1953-54	
3	Kolar ...	8,577	1953-54	
4	Tumkur ...	6,916	1949-50	
		43,517	1950-51	
		1,21,621	1951-52	
		1,85,595	1952-53	
		2,19,933	1953-54	
5	Hassan ...	2,918	1950-51	
		30,406	1952-53	
		36,148	1953-54	
6	Chitaldrug ...	9,06,727	...	This represents the loans and contributions that were due from the District Board from 1950-51 to 1953-54.
7	Shimoga ...	25,629	1949-50	
		55,049	1951-52	
		88,937	1952-53	
		73,393	1953-54	
8	Mandya ...	31,645	1951-52 and 1952-53	
		1,881	1952-53	
		3,581	1953-54	
9	Bellary ...	...	...	Only the bills on account of the current road maintenance works were pending and they were paid from time to time regularly.
10	Chikmagalur ...	52,031	1953-54	

STATEMENT B.

Statement showing the amount required to complete all the works taken up by the several District Boards.

Serial No.	Name of the District Board	Amount required to complete the works proposed	Amount required to complete the works estimated	Amount required to complete the works for which estimates are sanctioned	Amount required to complete the works taken up but not completed	Remarks
		Rs.	Rs.	Rs.	Rs.	
1	Bangalore ...	2,88,756	2,87,189	2,87,189	1,02,416	...
2	Mysore ...	7,56,457	9,35,538	9,35,538	9,35,538	...
3	Kolar ...	4,43,710	4,26,015	3,79,371	1,43,975	...
4	Tumkur ...	5,49,160	...	1,57,339	2,41,869	...
5	Hassan ...	nil	nil	16,546	16,546	...
6	Chitaldrug ...	3,98,502	4,02,002	86,755	1,82,475	...
7	Shimoga ...	nil	nil	2,74,814	nil	...
8	Mandya ...	...	...	...	...	*
9	Bellary ...	nil	nil	nil	nil	...
10	Chikmagalur ...	nil	6,75,487	6,75,487	6,75,487	†

*Total Rs. 1,56,850

†All the works are under execution through Public Works Department and under progress.

ಶ್ರೀ ಕೆ. ಪ್ರಭಾಕರ್.—ಈ ಜಿಲ್ಲಾ ಬೋರ್ಡುಗಳ ಆಡಳಿತವನ್ನು ಜಿಲ್ಲಾಧಿಕಾರಿಗಳು ವಹಿಸಿಕೊಂಡ ಮೇಲೆ ಅವರಿಗೆ ಸಾಕಷ್ಟು ಹಣವಿಲ್ಲದೆ ಕೆಲಸಮಾಡಿ ಪೂರೈಸಿದ್ದಂಥ ಕಂಟ್ರಾಕ್ಟರುಗಳಿಗೂ ಕೂಡ ಅವರ ಕ್ಲೈಮಂಗಳನ್ನಿನ್ನೂ ತೀರ್ಮಾನಿಸದೆ ಆ ಕಂಟ್ರಾಕ್ಟರುಗಳಿಗೆ ಪೂರಾ ತೊಂದರೆಯಾಗಿರುತ್ತೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ಗೊತ್ತಾದುದರಿಂದಲೇ ಬಹಳ ಭಾಗದ ಹಣವನ್ನು ಈಗಾಗಲೇ ಪಾವತಿಮಾಡಲಾಗಿದೆ. ಇನ್ನೆಲ್ಲಾ ನಿಂತಿರುವುದು ತೀರಾ ಸ್ವಲ್ಪಭಾಗ ಮಾತ್ರ.

ಶ್ರೀ ಕೆ. ಪ್ರಭಾಕರ್.—ಈಗಲೂ ಕೂಡ ಇನ್ನೂ ಅನೇಕ ಕಂಟ್ರಾಕ್ಟರುಗಳಿಗೆ ಹಣವಿಲ್ಲವೆಂದು ಹೇಳಿ ಅವರ ಬಿಲ್ಲುಗಳಿಗೆ ಪೇಮೆಂಟ್‌ಮಾಡದೆ—ಅವರನ್ನು ಹಿಂದಕ್ಕೆ ಕಳುಹಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಕೆಲವು ಕಡೆ ಕೆಲಸಗಳು ಇನ್ನೂ ಪೂರೈಸಿರುವುದಿಲ್ಲ. ಆ ಕೆಲಸಗಳನ್ನೆಲ್ಲಾ ಪೂರೈಸದಹೊರತು ಹಣವನ್ನು ಪಾವತಿ ಮಾಡಕೂಡದೆಂದು ತಿಳಿಸರಾಗಿದೆ. ಹಾಗೆ ಕೆಲಸಗಳು ಎಲ್ಲೆಲ್ಲ ಅರ್ಧಂಬರ್ಧ ಆಗಿವೆಯೋ ಅಂಥ ಕಡೆಗಳಲ್ಲಿ ಮಾತ್ರ ಪೇಮೆಂಟ್‌ನಿಂತಿದೆಯೇ ಹೊರತು ಬಾಕಿ ಕಡೆಗಳಲ್ಲೆಲ್ಲಾ ಪೇಮೆಂಟ್ ಮುಗಿದಿದೆ.

ಶ್ರೀ ಕೆ. ಪ್ರಭಾಕರ್.—ಹಾಗಾದರೆ ಈ ಮೈಸೂರು ಜಿಲ್ಲೆಯಲ್ಲಿ ಈ ಪೆಂಡಿಂಗ್ ಬಿಲ್ಲುಗಳ ಸಂಖ್ಯೆ ಇಷ್ಟೊಂದು ಜಾಸ್ತಿ ಇರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಈ ಹಿಂದೆ ಈ ಸಂಬಂಧವಾಗಿ ಒಂದು ಪ್ರಶ್ನೆ ಈ ಸಭೆಯಮುಂದೆ ಚರ್ಚೆಗೆ ಬಂದಿತ್ತು. ಆಗ ಇದಕ್ಕೆಲ್ಲಾ ಉತ್ತರ ಕೊಟ್ಟಿದ್ದೇನೆ. ಆ ಜಿಲ್ಲೆಯಲ್ಲಿ ಅನೇಕ ಕೆಲಸಗಳು ಅರ್ಧಂಬರ್ಧ ಆಗಿರುತ್ತವೆ. ಆ ಕೆಲಸಗಳೆಲ್ಲವೂ ಪೂರ್ತಿಯಾಗದ ಏನಾ ಪೇಮೆಂಟ್ ಮಾಡಬಾರದೆಂದು ತಿಳಿಸಿರುತ್ತದೆ. ಆದುದರಿಂದ ಆ ಜಿಲ್ಲೆಯಲ್ಲಿ ಸ್ವಲ್ಪ ಪೆಂಡಿಂಗ್ ಬಿಲ್ಲುಗಳು ಇವೆ.

ಶ್ರೀ ಕೆ. ಪ್ರಭಾಕರ್.—ಮೈಸೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಆ ಜಿಲ್ಲಾ ಬೋರ್ಡು ಫಾರ್ಕ್‌ನ್ನು ವಹಿಸಿಕೊಂಡ ಮೇಲೆ ಹಾಲಿ ಅವರಲ್ಲಿದ್ದ ಕ್ಯಾಷ್ ಬೊಬಲಗೆಷ್ಟೆಂದು ಕೇಳಿರುವುದಕ್ಕೆ ಮೈನಸ್ 5,01,307 ರೂಪಾಯಿಗಳೆಂದು ಹೇಳಿದ್ದೀರಿ. ಇದರ ಅರ್ಥವೇನು?

ಶ್ರೀ ಟಿ. ಚನ್ನಯ್ಯ.—ಅವರಿಗೆ ಇತರ ಇರಾಖೆಗಳಿಂದ ಬರತಕ್ಕಂಥ ಬೊಬಲಗು ವಿಶೇಷವಾಗಿದ್ದುದರ ಭರವಸೆಯ ಮೇಲೆ ಅವರು ಅಷ್ಟು ಹಣವನ್ನು ಹೆಚ್ಚಿಗೆ ಖರ್ಚು ಮಾಡಿದ್ದಾರೆ. ಆದುದರಿಂದ ಹಾಗೆ ಹೇಳಿದೆ.

ಶ್ರೀ ಕೆ. ಪ್ರಭಾಕರ್.—ಚಿಕ್ಕಮಗಳೂರು ಜಿಲ್ಲೆಯ ಲ್ಲಿ 6,75,487 ರೂಪಾಯಿಗಳ ಕೆಲಸ ಮಾಡಬೇಕಾದದ್ದು ಇನ್ನೂ ಉಳಿದಿತ್ತು. ಅದನ್ನು ಈಗ ರೆವಿನ್ಯೂ ಇಲಾಖೆಯಿಂದ P.W.D.ಗೆ ವಹಿಸಿದ್ದಾರೆ. ಈ ಒಂದು ಜಿಲ್ಲೆಗೆ ಮಾತ್ರ ತಾವು ಈ ನೀತಿಯನ್ನು ಅನುಸರಿಸಲು ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಹಾಗೆ ಮಾಡುತ್ತಿರುವುದು ಈ ಒಂದು ಜಿಲ್ಲೆಗೇ ಅಲ್ಲ. ಈ ರೀತಿ ಇನ್ನೂ ಅನೇಕ

(ಶ್ರೀ ಟಿ. ಚನ್ನಯ್ಯ.)

ಜಿಲ್ಲೆಗಳಲ್ಲಿ ಈ ರೆವಿನ್ಯೂ ಇಲಾಖೆಗೆ P.W.D. ಸಹಾಯವನ್ನು ಒದಗಿಸಿಕೊಟ್ಟಿರುತ್ತದೆ.

ಶ್ರೀ ಕೆ. ಪ್ರಭಾಕರ್.—ಈ ಒಂದು ಜಿಲ್ಲೆಗೆ ಹೀಗೆ 20 ಲಕ್ಷದವರೆಗೂ ಉಪಕಾರಮಾಡಿ, ಬೇರೆ ಜಿಲ್ಲೆಗಳಿಗಾವುದಕ್ಕೂ ಈ ರೀತಿ ಉಪಕಾರ ನೀಡದೆ ಇರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಇದೇ ರೀತಿ ಎಲ್ಲಾ ಜಿಲ್ಲೆಗಳಿಗೂ ಉಪಕಾರ ನೀಡಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಆ ಮೈಸೂರು ಜಿಲ್ಲಾ ಬೋರ್ಡಿಗೆ ಸರ್ಕಾರದವರು ಕೊಡತಕ್ಕ ಗ್ರಾಂಟ್ ಪೊಬಲಗು ಎಷ್ಟು?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ.—ಈಗ ಮೈಸೂರು ಜಿಲ್ಲೆಯಲ್ಲಿ ಅಂದಾಜು ಮಂಜೂರಾಗಿ ಕೆಲಸ ಪೂರ್ತಿಯಾಗದೆ ನಿಂತಿರತಕ್ಕ ಐಟಂಗಳ ಬಗ್ಗೆ 9,35,538 ರೂಪಾಯಿಗಳು ಬೇಕಾಗಿರುತ್ತವೆಂದು ಹೇಳಿದ್ದೀರಿ. ಈ ಪೊಬಲಗನ್ನು ಒದಗಿಸುವುದಕ್ಕೆ ತಾವೇನು ಏರ್ಪಾಡು ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಆ ಜಿಲ್ಲೆಯಲ್ಲಿ ಇಕಂಪ್ಲೀಟ್ ಆಗಿ ಉಳಿದಿರತಕ್ಕಂಥ ಕೆಲಸಗಳನ್ನು ಪೂರ್ತಿಗೊಳಿಸಲು ಎಷ್ಟು ಪೊಬಲಗು ಬೇಕೋ ಅಷ್ಟನ್ನು ಬೇಕಾದರೆ ಸಾಲವಾಗಿ ಕೊಡುತ್ತೇವೆ. ಮತ್ತೆ ಕೆಲವು ಪೊಬಲಗನ್ನು ಗ್ರಾಂಟ್ ರೂಪವಾಗಿ ಕೊಡಬಹುದು.

ಶ್ರೀ ಯು. ಎಂ. ಮಾದಪ್ಪ.—ಮೈಸೂರು ಜಿಲ್ಲೆಗೆ ತಾವು ಈ ವರ್ಷ ಎಷ್ಟು ಪೊಬಲಗನ್ನು ಗ್ರಾಂಟ್ ರೂಪವಾಗಿ ಕೊಟ್ಟಿದ್ದೀರಿ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ.—ಈ ಅರಗೊರತೆಯಾಗಿರುವಂಥ ಕೆಲಸಗಳನ್ನು ಮುಗಿಸಲು ತಮಗೆ ಇನ್ನೂ ಎಷ್ಟು ವರ್ಷಗಳಕಾಲ ಬೇಕಾಗಬಹುದು?

ಶ್ರೀ ಟಿ. ಚನ್ನಯ್ಯ.—ಇಷ್ಟೇ ವರ್ಷಗಳಲ್ಲಿ ಮುಗಿಸುತ್ತೇವೆಂದು ಹೇಳುವುಕ್ಕಾಗುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಈ ಇಕಂಪ್ಲೀಟ್ ವರ್ಕ್ಸ್‌ಗಳನ್ನು ಕಂಪ್ಲೀಟು ಮಾಡಲು ಬೇಕಾಗಿರುವಂಥ ಈ 9,35,538 ರೂಪಾಯಿಗಳನ್ನು ಒದಗಿಸತಕ್ಕ ಬಗ್ಗೆ ತಾವೇನು ಏರ್ಪಾಡುಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಅವುಗಳಿಗೆ ಬೇಕಾಗಿರತಕ್ಕ ಹಣ ಒದಗದೆ ಇದ್ದುದರಿಂದಲೇ ಆ ಕೆಲಸಗಳು ಅರಗೊರತೆಯಾಗಿ ನಿಂತಿರುತ್ತವೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ತಮಗೆ ಈಬಗ್ಗೆ ಹಣವನ್ನು ಒದಗಿಸಲು ಸಾಧ್ಯವಾಗದೆ ಹೋದರೆ ಇಲ್ಲಿಯವರೆಗೂ ಖರ್ಚು ಮಾಡಿರುವಂಥ ಹಣ ಒಂದು ನ್ಯಾಷನಲ್ ವೇಸ್ಟ್ ಆದಂತೆ ಆಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಈ ಪ್ರಶ್ನೆಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಜಿಲ್ಲಾ ಬೋರ್ಡುಗಳವರಿಗೆ ಇರತಕ್ಕಂಥ ವರಮಾನವೇನು, ಅವರು ಕೈಗೊಳ್ಳಬೇಕಾಗಿರತಕ್ಕಂಥ ಕೆಲಸಕಾರ್ಯಗಳೇನೆಂಬುದರ ಬಗ್ಗೆ ಅವರೇನಾದರೂ ಒಂದು ಬಡ್ಜೆಟ್ಟನ್ನು ತಯಾರಿಸುವ ವ್ಯವಸ್ಥೆಯನ್ನಿಟ್ಟಿಕೊಂಡಿದ್ದಾರೆಯೆ?

ಶ್ರೀ ಟಿ. ಚನ್ನಯ್ಯ.—ಅವರಿಗೂ ಈ ಬಡ್ಜೆಟ್ ತಯಾರಿಸುವ ಅಭ್ಯಾಸವಿದೆ. ಈಗ ಅವರು ತಯಾರಿಸತಕ್ಕಂಥ ಬಡ್ಜೆಟ್ಟುಗಳ ಕಾಪಿಯೊಂದನ್ನು ನಮಗೂ ಸಹ ಕಳುಹಿಸಿ ಕೊಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಾದರೆ ಬೆಂಗಳೂರು ಜಿಲ್ಲಾ ಜೋರ್ಡಿನವರ ಈ ವರ್ಷದ ಆದಾಯವೇನು?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಮೈಸೂರು ಜಿಲ್ಲಾಧಿಕಾರಿಗಳು ಆ ಮೈಸೂರು ಜಿಲ್ಲಾ ಬೋರ್ಡಿನ ಆಡಳಿತವನ್ನು ವಹಿಸಿಕೊಳ್ಳುವಾಗ ಮೈನಸ್ 5,01,307 ರೂಪಾಯಿಗಳ ಬಂಡವಾಳವಿತ್ತೆಂದು ತಾವು ಹೇಳಿದ್ದೀರಿ. ಅಂದರೆ ಆ ಜಿಲ್ಲಾ ಬೋರ್ಡಿನವರು ಅಷ್ಟು ಸಾಲ ಕೊಡಬೇಕಾಗಿತ್ತು ಎಂದೇನು ಇದರ ಅರ್ಥ?

ಶ್ರೀ ಟಿ. ಚನ್ನಯ್ಯ.—ಹಾಗಲ್ಲ. ಅವರು ಅಷ್ಟು ಹಣವನ್ನು ಹೆಚ್ಚಿಗೆ ಖರ್ಚುಮಾಡಿದ್ದಾರೆ ಎಂದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅವರ ಕೈಲಿ ಹಣವೇ ಇಲ್ಲದಿರುವಾಗ, ಬರಿಗೈಲಿ ಹೀಗೆ ಖರ್ಚು ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ?

ಶ್ರೀ ಟಿ. ಚನ್ನಯ್ಯ.—ಅವರ ಕೈಲಿ ಬೇಕಾದಷ್ಟು ಹಣವಿತ್ತು. ಅವರಿಗೆ ಬೇರೆ ಬೇರೆ ಇಲಾಖೆಗಳಿಂದ ಹಣ ಬರಬೇಕಾಗಿತ್ತು. ಆ ಹಣವನ್ನೆಲ್ಲಾ ವಸೂಲ್ಮಾಡುತ್ತೇವೆಂಬ ಭರವಸೆಯಮೇಲೆ ಹಾಗೆ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಿದ್ದರೆ ಅವರಿಗೆ ಬೇರೆ ಯಾವ ಯಾವ ಇಲಾಖೆಗಳಿಂದ ಎಷ್ಟೆಷ್ಟು ಪೊಬಲಗು ಬರಬೇಕಾಗಿತ್ತೆಂಬುದನ್ನು ತಿಳಿಸುವಿರಾ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ತಾವು ಈ ಮೈಸೂರು ಜಿಲ್ಲಾ ಬೋರ್ಡಿನಲ್ಲಿ ಅರಗೊರತೆಯಾಗಿರುವಂಥ ಕೆಲಸಗಳನ್ನು ಪೂರ್ತಿಮಾಡಬೇಕಾಗಿದ್ದರೆ 9,35,538 ರೂಪಾಯಿಗಳು ಬೇಕಾಗಿರುತ್ತವೆಂದು ಹೇಳಿದ್ದೀರಿ. ಆದರೆ ಈ ಕೆಲಸಗಳೆಲ್ಲಾ ಅಂದಾಜಾಗಿರುವುದು ಆ ಜಿಲ್ಲಾ ಬೋರ್ಡಿನ ಅಧಿಕಾರವನ್ನು ಮೈಸೂರು ಜಿಲ್ಲಾಧಿಕಾರಿಗಳು ವಹಿಸಿಕೊಂಡನಂತರ ಅಲ್ಲವೆ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಜಿಲ್ಲಾಧಿಕಾರಿಗಳು ಈ ಜಿಲ್ಲಾ ಬೋರ್ಡುಗಳ ಧಾರ್ಜನ್ನು ವಹಿಸಿಕೊಂಡ ಮೇಲೆ ಅರಗೊರತೆಯಾಗಿರತಕ್ಕಂಥ ಕೆಲಸಗಳನ್ನು ಪೂರೈಸಲು ತಾವು ಎಷ್ಟೆಷ್ಟು ಹಣವನ್ನು ಸಹಾಯ ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಅನೇಕ ಜಿಲ್ಲಾ ಬೋರ್ಡುಗಳಿಗೆ ಸರ್ಕಾರ ಸಾಲದ ರೂಪವಾಗಿ ಬಹಳ ಹಣವನ್ನು ಕೊಟ್ಟಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಾದರೆ 1954-55ರಲ್ಲಿ ಆ ಮೈಸೂರು ಜಿಲ್ಲಾ ಬೋರ್ಡಿಗೆ ಎಷ್ಟು ಹಣವನ್ನು ಸಾಲದ ರೂಪದಲ್ಲಿ ಕೊಡಲಾಗಿದೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಾದರೆ ಈ ಜಿಲ್ಲಾ ಬೋರ್ಡುಗಳು ಯಾವರೀತಿ ಕೆಲಸ ಮಾಡುತ್ತಿವೆಯೆನ್ನುವುದನ್ನು ತಾವು ಅಷ್ಟಾಗಿ ಗಮನಿಸಬೇ

ಕಾದ ಅಗತ್ಯವಿದ್ದಹಾಗೆ ಕಾಣುತ್ತಿಲ್ಲ. ಆದುದರಿಂದ ಅಲ್ಲವೆ ತಾವೀಗ ಹೀಗೆ ಉತ್ತರ ಕೊಡುತ್ತಿರುವುದು?

ಶ್ರೀ ಟಿ. ಚನ್ನಯ್ಯ.—ತಾವು ಉಚಿತವಾದ ಮತ್ತು ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಉಪಪ್ರಶ್ನೆಗಳನ್ನು ಹಾಕಿದ್ದರೆ ನಾನೂ ಸಹ ಆಗ ಉಚಿತವಾದಂಥ ಉತ್ತರ ಕೊಡುತ್ತಿದ್ದೆನು.

Mr. SPEAKER.—There are so many points to which the Government cannot readily furnish the answer.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ಜಿಲ್ಲಾ ಬೋರ್ಡಿಗೆ ಎಷ್ಟು ಗ್ರಾಂಟನ್ನು ಕೊಟ್ಟಿದ್ದೀರಿ ಅಂತ ಕೇಳಿದರೆ ಅದಕ್ಕೂ ನೋಟೀಸ್, ಮೈಸೂರು ಜಿಲ್ಲಾ ಬೋರ್ಡಿಗೆ ಎಷ್ಟು ಗ್ರಾಂಟ್ ಕೊಟ್ಟಿದ್ದೀರಿ ಎಂದು ಕೇಳಿದರೆ ಅದಕ್ಕೂ ನೋಟೀಸ್ ಎಂತಲೇ ಹೇಳುತ್ತಿದ್ದಾರೆ. . . .

Mr. SPEAKER.—If the Hon'ble Member wants, the information will be furnished.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಆ ಮೈಸೂರು ಜಿಲ್ಲಾಬೋರ್ಡಿನವರು ಸರ್ಕಾರಕ್ಕೇನೂ ಸಾಲವಂದಿಗರಾಗಿಲ್ಲ ಅಲ್ಲವೇ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು ಜಿಲ್ಲಾ ಬೋರ್ಡಿನವರು ಮೈಸೂರು ಸರ್ಕಾರದವರಿಗೆ ಒಂದು ಲಕ್ಷದವರೆಗೂ ಸಾಲ ಕೊಟ್ಟಿದ್ದಾರೆ ಅನ್ನುವುದಾದರೂ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು ಜಿಲ್ಲಾ ಬೋರ್ಡಿನ ಆಡಳಿತವನ್ನು ಮೈಸೂರು ಜಿಲ್ಲಾಧಿಕಾರಿಗಳು ತೆಗೆದುಕೊಳ್ಳುವಾಗ ಸರ್ಕಾರದವರು ಆ ಜಿಲ್ಲಾ ಬೋರ್ಡಿಗೆ 10 ಲಕ್ಷ ರೂಪಾಯಿಗಳಿಂದ ಹಿಡಿದು 11 ಲಕ್ಷದವರೆಗೂ ಹಣವನ್ನು ಕೊಡಬೇಕಾಗಿತ್ತಲ್ಲವೇ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಮೈಸೂರು ಜಿಲ್ಲಾ ಬೋರ್ಡು ಸುಮಾರು 6 ಕೋಟಿ ರೂಪಾಯಿಗಳಷ್ಟು ಹಣವನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲುಗಳನ್ನು ಸ್ಥಾಪಿಸುವುದಕ್ಕಾಗಿ, ಹೀಗೆಲ್ಲಾ ಖರ್ಚು ಮಾಡಿದ್ದಾರೆ ಅನ್ನುವುದಾದರೂ ತಮಗೆ ಗೊತ್ತಿದೆಯೇ?

ಶ್ರೀ ಟಿ. ಚನ್ನಯ್ಯ.—ಹಾಗೆ ಆ ಕೆಲಸ ಕಾರ್ಯಗಳನ್ನು ಕೈಗೊಂಡಿರುವುದು ಸರ್ಕಾರದವರ ಗಮನಕ್ಕೂ ಬಂದಿದೆ.

1 P.M.

Sri A. G. RAMACHANDRA RAO.—It is true that they put up a number of primary schools and the Government are looking into the accounts.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು ಸರ್ಕಾರದವರು ಪ್ರಾಥಮಿಕ ಶಾಲಾ ಕಟ್ಟಡಗಳಿಗೆ ಸುಮಾರು 3½ ಲಕ್ಷದಿಂದ ಹಿಡಿದು 4 ಲಕ್ಷದವರೆಗೆ ಬಾಕಿದಾರರಾಗಿದ್ದಾರೆಂಬುದು ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಾಕಿದಾರರೆಂದು ಹೇಳುವುದಕ್ಕಾಗುವುದಿಲ್ಲ. Accounts ಬಂದರೆ ಗೊತ್ತಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—9 ಲಕ್ಷದ ಪೈಕಿ 3½ ಲಕ್ಷ ದಾನಿಗಳಿಂದ ಬರಬೇಕಾದುದು ಎಂದು ನೂಚಿಸುತ್ತೇನೆ, ಇದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೀಗೆ ಧಾನಿಗಳಿಂದ ಬರಬೇಕಾದ ಮೂರು ಲಕ್ಷ ಚಿಲ್ಲರೆ ಮತ್ತು ಸರ್ಕಾರದಿಂದ ಬರಬೇಕಾದ ಮೂರು ಲಕ್ಷ ರೂಪಾಯಿಗಳನ್ನು ಈ ಒಂಬತ್ತು ಲಕ್ಷ ರೂಪಾಯಿಗಳಲ್ಲಿ ತೋರಿಸಿರುವುದು ನಿಜವಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ರಿಪೋರ್ಟನ್ನು ಪರಿಶೀಲಿಸುತ್ತೇವೆ.

Sri K. PUTTASWAMY.—What is the statutory closing balance that is required in a District Board.

Sri T. CHANNIAH.—The information is not readily available. I cannot say it now.

Sri K. PUTTASWAMY.—Is minus closing balance and minus account permissible for any local governing body?

Sri A. G. RAMACHANDRA RAO.—There is no question of permissibility here. If extra expenditure has been incurred, the balance will be less.

Sri K. PUTTASWAMY.—The answer was not audible. I want the Minister to repeat the answer.

Sri A. G. RAMACHANDRA RAO.—No doubt a lower permissible limit has been prescribed but if the accounts were to show lesser amount or even minus balance, it is a question of inevitability and it cannot be helped.

†*Q.*—324—

Compulsory retirement of Sri T. Ranga Rao, Assistant Accountant, Municipal Commission, C. & M. Station.

Mr. SPEAKER.—Now we shall take up the question of Sri P. R. Ramaiya, No. 324 which was postponed the other day.

ಶ್ರೀ ಪಿ. ಆರ್. ರಾಮಯ್ಯ.—ಡಿಸ್ಟ್ರಿಕ್ಟ್ ಕೋರ್ಟ್ ನವರು ತಾರೀಖು 6-6-1950ರಲ್ಲಿ judgment ಕೊಡಲಲ್ಲವೇ?

ಶ್ರೀ ಟಿ. ಚನ್ನಯ್ಯ.—ಕೊಟ್ಟಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—ತಾವು ಕೊಟ್ಟಿರತಕ್ಕ ಉತ್ತರದಲ್ಲಿ "The High Court heard on 28th March 1949 and also dismissed with costs" ಎಂದು ಹೇಳುತ್ತೀರಿ. ಇದು ಸರಿಯಾದ ಉತ್ತರವಲ್ಲ. ಹೈಕೋರ್ಟಿಗೆ ಯಾವ ಅಪೀಲನ್ನೂ ಮಾಡಿಲ್ಲ, ಹೈಕೋರ್ಟಿನವರು 28-3-1949 ರಲ್ಲಿ dismiss ಮಾಡಿದರು ಎಂದು ಹೇಳುತ್ತೀರಿ. ಆದರೆ ಡಿಸ್ಟ್ರಿಕ್ಟ್ ಕೋರ್ಟ್ ಜೂ 6ರಲ್ಲಿ judgment ಕೊಟ್ಟಿರುವುದು. ಹಾಗಾದರೆ 3 ತಿಂಗಳ ಹಿಂದೆ dismiss ಮಾಡುವುದಕ್ಕೆ ಸಾಧ್ಯವೇ?

† For previous supplementaries please refer to pp. 465–467 of Vol. XII—No. 10.